# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 546 |
| ಸದಸ್ಯರ ಹೆಸರು | : | ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 19.07.2024 |
| ಉತ್ತರಿಸುವವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದ ರಾಜಧಾನಿ ಮತ್ತು ಇತರ ಪ್ರಮುಖ ನಗರ ಪ್ರದೇಶಗಳಿಗೆ ಉದ್ಯೋಗ, ಸಂದರ್ಶನ, ಪ್ರವೇಶ ಪರೀಕ್ಷೆಗಳಿಗೆ ಬರುವಂತಹ ಯುವತಿ/ಮಹಿಳೆಯರಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ಯೋಜನೆಗಳ ಅಡಿಯಲ್ಲಿ ಒದಗಿಸಿರುವ ಟ್ರಾನ್ಸಿಟ್ ಹಾಸ್ಟೆಲ್ ವ್ಯವಸ್ಥೆಗಳು ಯಾವುವು; ಈ ಟ್ರಾನ್ಸಿಟ್ ಹಾಸ್ಟೆಲ್ ವ್ಯವಸ್ಥೆ ಕಾರ್ಯ ಸ್ವರೂಪ ಮತ್ತು ನೀಡುವ ಸೌಲಭ್ಯಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು) | ಉದ್ಯೋಗ, ಸಂದರ್ಶನ, ಪ್ರವೇಶ ಪರೀಕ್ಷೆ ಹಾಗೂ ಇನ್ನಿತರೆ ಕೋರ್ಸ್‌ಗಳ ಪ್ರವೇಶ ಪರೀಕ್ಷೆಗಳಿಗೆ ಹಾಜರಾಗಲು ಬೆಂಗಳೂರಿಗೆ ಬರುವ ಮಹಿಳೆಯರಿಗೆ ಸುರಕ್ಷಿತ ಆಶ್ರಯ, ರಕ್ಷಣೆ ಹಾಗೂ ಇನ್ನಿತರ ಅಂಶಗಳನ್ನು ಪರಿಗಣಿಸಿ ರಾಜ್ಯ ಸರ್ಕಾರವು 11 ಟ್ರಾನ್ಸಿಟ್ ಹಾಸ್ಟೆಲ್‌ಗಳನ್ನು ಪ್ರಾರಂಭಿಸಿದೆ, ಎಲ್ಲಾ ವರ್ಗದ ಮಹಿಳೆಯರಿಗೂ ವರಮಾನ ಮಿತಿಯಿಲ್ಲದೆ ಗರಿಷ್ಟ 3 ದಿನಗಳು ತಂಗಲು ಅವಕಾಶ, ಉಚಿತ ವಸತಿ, ಉಪಹಾರ, ಊಟ, ಮತ್ತು ಸ್ನಾನಕ್ಕೆ ಬಿಸಿನೀರು, ಭದ್ರತಾ ಕಪಾಟು ಸೌಲಭ್ಯವನ್ನು ನೀಡಲಾಗುತ್ತಿದ್ದು ಯಾವುದೇ ಶುಲ್ಕ ವಿಧಿಸಲಾಗಿವುದಿಲ್ಲ. ಈ ಯೋಜನೆಯು ಬೇರೆ ಜಿಲ್ಲೆಗಳಿಂದ ಒಂಟಿಯಾಗಿ ಬೆಂಗಳೂರಿಗೆ ಬರುವ ವಿದ್ಯಾರ್ಥಿನಿಯರು ಮತ್ತು ಮಹಿಳೆಯರಿಗೆ ಮಾತ್ರ ಅನ್ವಯಿಸುತ್ತದೆ. |
| ಆ. | ಕಳೆದ ಮೂರು ವರ್ಷಗಳಲ್ಲಿ ಈ ಟ್ರಾನ್ಸಿಟ್ ಹಾಸ್ಟೆಲ್ ವ್ಯವಸ್ಥೆಯಲ್ಲಿ ಸೌಲಭ್ಯ ಪಡೆದ ಯುವತಿಯರ/ಮಹಿಳೆಯರ ಸಂಖ್ಯೆ ಎಷ್ಟು; (ವರ್ಷವಾರು ಮತ್ತು ಹಾಸ್ಟೆಲ್‌ವಾರು ಪೂರ್ಣ ಮಾಹಿತಿ ನೀಡುವುದು) | ಕಳೆದ ಮೂರು ವರ್ಷಗಳಲ್ಲಿ ಟ್ರಾನ್ಸಿಟ್ ಹಾಸ್ಟೆಲ್ ವ್ಯವಸ್ಥೆಯಲ್ಲಿ ಸೌಲಭ್ಯ ಪಡೆದ ಯುವತಿಯರ/ಮಹಿಳೆಯರ ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಿದೆ. |
| ಇ. | ರಾಜ್ಯದಲ್ಲಿರುವ ಟ್ರಾನ್ಸಿಟ್ ಹಾಸ್ಟೆಲ್ ವ್ಯವಸ್ಥೆ ಕೇವಲ ರಾಜ್ಯದ ಯುವತಿಯರು/ಮಹಿಳೆಯರಿಗೆ ಸೀಮಿತವಾಗಿದೆಯೇ; ಅಥವಾ ಇತರೆ ರಾಜ್ಯದವರಿಗೂ ನೀಡುವ ವ್ಯವಸ್ಥೆ ಇದೆಯೇ; (ಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿರುವ ಟ್ರಾನ್ಸಿಟ್ ಹಾಸ್ಟೆಲ್ ವ್ಯವಸ್ಥೆ ಕೇವಲ ರಾಜ್ಯದ ಎಲ್ಲಾ ಜಿಲ್ಲೆಗಳ ಯುವತಿಯರು/ಮಹಿಳೆಯರಿಗೆ ಮಾತ್ರ ಸೀಮಿತವಾಗಿದೆ. |

| | | |
|---|---|---|
| ಈ. | ರಾಜ್ಯದಲ್ಲಿರುವ ಇಂತಹ ಟ್ರಾನ್ಸಿಟ್ ಹಾಸ್ಟೆಲ್ ವ್ಯವಸ್ಥೆ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಲು ಸರ್ಕಾರವು ಕೈಗೊಂಡಿರುವ ಕ್ರಮಗಳು ಯಾವುವು? (ಪೂರ್ಣ ಮಾಹಿತಿ ನೀಡುವುದು) | ಟ್ರಾನ್ಸಿಟ್ ಹಾಸ್ಟೆಲ್ ಕುರಿತು ಜನ ಸಾಮಾನ್ಯರಿಗೆ ಸಾರ್ವಜನಿಕ ಸ್ಥಳಗಳಲ್ಲಿ ಕರ ಪತ್ರಗಳನ್ನು ಹಂಚುವುದರ ಮೂಲಕ ದೂರದರ್ಶನ/ಮಾಧ್ಯಮ, ಸಾಮಾಜಿಕ ಜಾಲತಾಣಗಳಲ್ಲಿ ಅರಿವು ಮೂಡಿಸಲಾಗಿದೆ. |

**ಸಂಖ್ಯೆ: ಮಮಇ 147 ಮಮಅ 2024**

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಸಚಿವರು

# ಅನುಬಂಧ

| Sl.No | Name of the NGOs | 2021-22 | 2022-23 | 2023-24 |
|---|---|---|---|---|
| 1 | Karnataka State Council for Child Welfare, Working Women's Hostel,No.135,3rdCross, Nandidurga Road, Jayamahal extn.,Bangalore-46 | ಕೋವಿಡ್ ಪ್ರಯುಕ್ತಯಾವುದೇ ಮಹಿಳೆಯರು ಟ್ರಾನ್ಸಿಟ್ ಹಾಸ್ಟೆಲ್‌ಯೋಜನೆಯಡಿದಾಖಲಾಗಿರುವುದಿಲ್ಲ. | 20 | **19** |
| 2 | Sri SharadaKutira Working Women's Hostel,No.. 46, RangaRao Road, Shankarapura, Bangalore-4 | | 17 | 19 |
| 3 | Young Women Christian Association Working women's Hostel, No.32, CSI Compound,Mission Road, Bangalore-27. | | 19 | 21 |
| 4 | University Women's Association Working Women's Hostel,No. 43 , 4th Main, Sampangiramanagara, Bangalore-27. | | 21 | 20 |
| 5 | Mahathma Gandhi VidyaPeeta Working Women's Hostel, ShavigeMalleshwaraHills,Kumaraswamylayout,Bangalore-78. | | 16 | 19 |
| 6 | JayanagaraStreeSamaja Working Women's Hostel, No. 141, 5th Cross, Ist Block, Jayanagar, Bangalore-11. | | 19 | 22 |
| 7 | All India Women's Conference Working Women's Association No. 67, 7th 'C' Main Road, Corporation Lay out, 4thBlock, Jayanagara, Bangalore-11. | | 22 | 20 |
| 8 | BasavaSamithiBasava Working Women's Hostel, Basavashrama,NearKengeri,Mysore Road, Bangalore. | | 21 | 19 |
| 9 | National Law School of Indian University Working Women's Hostel,P.B No. 7201, Nagarabhavi Campus, Bangalore-72. | | 19 | 18 |
| 10 | Young Women Christian Association Working women's Hostel, Plot No.7,20th main,6th Block, Koramangala, Bangalore-95. | | 17 | 16 |
| 11 | Regional Institute of English South India Working women's Hostel, Gnanabharathi Campus, Bangalore-56. | | 18 | 21 |
| ಒಟ್ಟು | | | 209 | 214 |